ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ
*ನಾಲಗೆಯು ಕುಲವನ್ನು ಅರುಹುವುದಂತೆ. ಪೆನ್ನು ಏನನ್ನು ಅರುಹುತ್ತದೆ ರಾಂಜೀ?*



ಸುಸಂಸ್ಕೃತನೋ, ಅಸಂಸ್ಕೃತನೋ ಎಂಬುದನ್ನು.

ಉಷಾ ಸೋಗಲ್, ಬೆಂಗಳೂರು
*ರಣತಂತ್ರದಲ್ಲಿ ಚತುರನಾದ ಕೃಷ್ಣನ ಕೈಯಲ್ಲಿ ಕೊಳಲು; ಸೌಮ್ಯ ಸ್ವಭಾವದ ರಾಮನ ಕೈಯಲ್ಲಿ ಬಿಲ್ಲು. ಹೀಗೇಕೆ?*
ಅವರವರ ನಲ್ಲೆಯರನ್ನು ಸೆಳೆದಾಗ ಕೈಯಲ್ಲಿದ್ದದ್ದನ್ನೇ ಶಾಶ್ವತವಾಗಿ ಇರಿಸಿರುವರಷ್ಟೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಎರಡು ತುಟಿ ಸೇರಿದರೆ ಮೌನ. ನಾಲ್ಕು ತುಟಿಗಳು ಸೇರಿದರೆ ಫಜೀತಿ. ಏಕೆ?*
ಲಾಲಾರಸದ ವಿನಿಮಯಕ್ಕೆ ಲಾ ಪಾಯಿಂಟ್‌ಗಳು ಅಡ್ಡಬರುವುದರಿಂದ.

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ಯಮನನ್ನು ಸಂದರ್ಶನ ಮಾಡಬೇಕೆಂದಿರುವೆ. ಇದರ ಬಗ್ಗೆ ನಿಮ್ಮ ಅನಿಸಿಕೆ?*



ಹತ್ತಿರದ ನರ್ಸಿಂಗ್ ಹೋಂಗೆ ಹೋಗಿ. ಅವನ ವಿಳಾಸ ಸಿಗುತ್ತಾರೆ. ಬೆಸ್ಟ್ ವಿಷಸ್.

ಬಿ. ಬೋರೇಗೌಡ, ಸರಸ್ವತಿಪುರ
*ದೇವರು ಅನ್ನೋದು ವ್ಯಾಪಾರವಾಗಿದೆಯಲ್ಲ ಧರ್ಮಾಧಿಕಾರಿಗಳೇ...?*
ಮಲೆಗಳಲ್ಲಿ ಹುಡುಕುವ ಬದಲು ಮನಗಳಲ್ಲಿ ಹುಡುಕಿದರೆ ಚೀಪ್ ಆಗುತ್ತದಂತೆ.

ಸಾಲಿಗ್ರಾಮ ದೇವರಾಜು, ಮೈಸೂರು
*ಮಣ್ಣಿನ ಋಣ ತೀರಿಸುವುದು ಹೇಗೆ?*
ಮಣ್ಣಿನ ಸಾರ ಹೆಚ್ಚಿಸಿ ನೇಣಿನ ಘೋರ ಇಳಿಸುವ ಮೂಲಕ.

ವ. ಉಮೇಶ ಕಾರಂತ, ಮಂಗಳೂರು
*ಸಾಚಾ ಎಂದರೇನು?*
ಸಾ– ಸಾತ್ವಿಕವಾದ; ಚಾ– ಚಾರಿತ್ರ್ಯ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಮದುವೆಗೆ ಮೂರು ಗಂಟು, ಏಳು ಹೆಜ್ಜೆ. ಮಂತ್ರಿಯಾಗಲು?*
ಚೋರ ಗಂಟು, ಕೀಳು ಹೆಜ್ಜೆ.

ಮೋಹನ ರು. ಹಣಗಿ, ಅಮೀನಗಡ
*ಹಾರೈಕೆ-ಪೂರೈಕೆಗಳ ಅಂತರವೇನು ಆಚಾರ್ಯರೆ?*
ಬಂಧು–ಪೋಷಕರಿಗಿರುವ ಅಂತರವೇ. ಬಂಧು ಹಾರೈಸುವನು; ಪೋಷಕ ಪೂರೈಸುವನು.

ಎಸ್.ಎನ್. ಮಹಾಬಲ, ಎನ್ನಾರ್ ಪುರ
*ಪತಿಯಿಂದ ಸಿಗದ ಸುಖವನ್ನು ಪರರಿಂದ...?*
'ಹೊರಗಿನ ತಿಂಡಿ ಇಲ್ಲಿ ತಿನ್ನುವಂತಿಲ್ಲ'– ಹೊಟೇಲ್ ನಿಯಮ. ಅಲ್ಲಿಂದ ಹೊರಬಂದು ಹೊರಗಿನದನ್ನು ತಿಂದರೆ ಅಡ್ಡಿಯಿಲ್ಲ.

ಅಮರಯ್ಯಾ ಪತ್ರಿಮಠ, ಶೋರಾಪೂರ
*ಒಮ್ಮೆಯಾದರೂ ಜೋತಿಷಿಯ ಬಳಿ ನಿಮ್ಮ ಭವಿಷ್ಯವನ್ನು ಪರಿಶೀಲಿಸಿದ್ದೀರಾ?*
ಹೂಂ. 'ನೀವು ಹೇಳುವ ಭವಿಷ್ಯಕ್ಕೆ ನಾನು ಹಣ ಕೊಡುವೆನೋ ಇಲ್ಲವೋ ಹೇಳಿ' ಎಂದೆ. ಇನ್ನೂ ಹೇಳಿಲ್ಲ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
*ಒಂದು ಕಾಲದಲ್ಲಿ ಸಸ್ಯಾಹಾರಿ ಹೊಟೇಲ್‌ಗಳು ಜಾಸ್ತಿ ಇದ್ದವು. ಈಗ ಮಾಂಸಾಹಾರಿ ಹೊಟೇಲ್‌ಗಳು ಜಾಸ್ತಿ. ಏಕೆ?*
ಪ್ರಾಣ ತಿನ್ನುವ ಜನ ಹೆಚ್ಚಾದರಲ್ಲ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ರಾಮನಿಗೇ ವೀರಕಂಕಣ ಕಟ್ಟಿದ, ಹೊತ್ತು ತಂದವಳನ್ನು ಅಪ್ಪಿತಪ್ಪಿಯೂ ಮುಟ್ಟದ, ಅಪ್ರತಿಮ ಶಿವಭಕ್ತನನ್ನು ರಾಕ್ಷಸ ಎನ್ನುವುದು ತರವೆ?*
ತನ್ನ ಮರಣ ಸ್ವಾಗತಿಸಲು, ತನ್ನ ಬಯಕೆ ಹತ್ತಿಕ್ಕಿಕೊಳ್ಳಲು ಅಗಾಧ ದೈತ್ಯಶಕ್ತಿಯೇ ಬೇಕಾಗಿದ್ದರಿಂದ, ತರವೇ.

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ
*ಮೂರನೆಯ ಮಹಾಯುದ್ಧವಾದ ನಂತರ ಜಗದ ಮೇಲೆ ಏನು ಉಳಿಯಬಹುದು?*
ಯಾವುದಕ್ಕೂ ಸಾಯದೆ ಮೀಸೆ ತಿರುವಿಕೊಂಡು ಹೆಣ್ಣನ್ನು ಹೆದರಿಸುವ ಏಕೈಕ ಜಂತು– ಜಿರಳೆ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
*ತಮಗೆ ಏನು ಮಾಡಲು ಇಷ್ಟವಿಲ್ಲವೋ ಅದನ್ನು ಬೇರೆಯವರಿಂದ ಮಾಡಿಸುತ್ತಾರಲ್ಲ, ಏಕೆ?*
ಸುಳ್ಳಾಡಲಿಷ್ಟವಿಲ್ಲ; ವಕೀಲರು ಬದುಕಿದರು. ಅಡಿಗೆ ಮಾಡಲಿಷ್ಟವಿಲ್ಲ; ಹೊಟೆಲಿಗರು ಬದುಕಿದರು. ಎಲ್ಲಾ ಒಳ್ಳೆಯದಕ್ಕೇ!

ವಿದ್ಯಾ ಎನ್. ಪೈ, ಕಾಸರಕೋಡ
*ಟಿವಿಯಲ್ಲಿ ಮನೆ ಹಾಳು ಮಾಡುವ ಧಾರಾವಾಹಿಗಳೇ ಜಾಸ್ತಿ. ಯಾಕೆ?*
ಸೀತಾಪಹಾರ, ವಸ್ತ್ರಾಪಹಾರದಷ್ಟು ಅಶ್ವಮೇಧ, ರಾಜಸೂಯದ ಚರ್ಚೆಯಾಗದು. ಕೇಡಿನ ಆಕರ್ಷಣೆ ಒಳಿತಿಗಿಲ್ಲ.

ದೇವೇಂದ್ರ, ಕಡೂರು
*ಕತ್ತೆಗೆ ಕಸ್ತೂರಿ ವಾಸನೆ ಗೊತ್ತಾಗೊಲ್ಲ ಅಂತ ನಂಬುವುದಾದರೂ ಹೇಗೆ ಸಾರ್?*



ಕಾಮನ್ ಸೆನ್ಸ್! ದೋಭಿಘಾಟ್‌ನ ಸೋಪ್ ವಾಸನೆ ಅಡರಿದ ಮೂಗಿಗೆ ಬೇರಾವ ವಾಸನೆಯೂ ತಿಳಿಯುವುದಿಲ್ಲ.

ಎಂ.ಎ. ಕುಮಾರ್, ಬೆಂಗಳೂರು
*ವಾರ್ತೆಗಳನ್ನು ಹೇಳುವ ಸಮಯದಲ್ಲಿ ಸ್ಮಾಲ್ ಬ್ರೇಕ್ ಕೊಡುವುದೇಕೆ?*
ನಿರಂತರ ಶಬ್ದಮಾಲಿನ್ಯಕ್ಕೆ ತತ್ತರಿಸಿದ ವೀಕ್ಷಕ ಕೊಂಚ ಸುಧಾರಿಸಿಕೊಳ್ಳಲೆಂದು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಮರದ ಮೇಲಿರುವ ಹಕ್ಕಿ ನಂಬಿರುವುದು ಕೊಂಬೆಯನ್ನೋ, ತನ್ನ ರೆಕ್ಕೆಗಳನ್ನೋ?*
ಪಕ್ಷಿ ಆಸ್ತಿಕ ಆದರೆ ಕೊಂಬೆಯನ್ನು; ನಾಸ್ತಿಕ ಆದರೆ ತನ್ನ ರೆಕ್ಕೆಗಳನ್ನು.

■ ರಾಮ್